**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *15.01.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಜ್ಯೋತಿ ರವರಿಂದಃ**

. 3-4 ವರ್ಷಗಳಿಂದ ನನಗೆ ಗೀತಾ ಇವರ ಪರಿಚಯ ಇದೆ. ನನ್ನ ಗಂಡ ಮತ್ತು ಗೀತಾ ಗಾರೆ ಕೆಲಸಕ್ಕೆ ಹೊಗುವುದರಿಂದ ಗೀತಾ ಇವರ ಪರಿಚಯವಾಗಿತ್ತು. ನಾನು ಮನೆಯಲ್ಲೇ ಇರುತ್ತೇನೆ. ನನಗೂ ಗೀತಾ ಇವರಿಗೂ ತುಂಬಾ ಆತ್ಮೀಯತೆ ಎಂದರೆ ನಿಜ. ನಾನು ಗೀತಾ ಇವರ ಮನೆಯ ಕಾರ್ಯಕ್ರಮಗಳಿಗೆ ಹೋಗಿರಲಿಲ್ಲ. 2-3 ದಿನಕಿಂತ ಮುಂಚೆ ಗೀತಾ ಇವರು ನನಗೆ ಪೋನ್ ಮಾಡಿ ಬರುವಂತೆ ಹೇಳಿದ್ದರು. ನನ್ನ ಪೋನ್ ಅನ್ನು ಅಥವಾ ಪೋನ್ ಕರೆಗಳ ವಿವರಗಳನ್ನು ಪೊಲೀಸರಿಗೆ ಕೊಟ್ಟಿಲ್ಲ. ನನ್ನ ಅತ್ತೆ ಮಾವ ನನ್ನೊಂದಿಗೆ ವಾಸವಿದ್ದಾರೆ. ದಿಃ*14.07.2023* ರಂದು ಮದ್ಯಾಹ್ನ *12* ಗಂಟೆಗೆ ನಾವು ನಳೇನಹಳ್ಳಿಯಿಂದ ಹೊರಟಿದ್ದೆವು. ಆ ದಿನ ಹೊಗುವ ಮುಂಚೆ ಹಿಂದಿನ ದಿನ ರಾತ್ರಿ ನಾನು ಗೀತಾ ಇವರಿಗೆ ಪೋನ್ ಮಾಡಿದ್ದೆ. ಪೊಲೀಸರ ಮುಂದೆ ಹಿಂದಿನ ದಿನ ಪೋನ್ ಮಾಡಿದ್ದನ್ನು ಹೇಳಿಲ್ಲ. ದಿಃ*14.07.2023* ರಂದು ಗೀತಾ ಇವರಿಗೆ ಪೋನ್ ಮಾಡಿದ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಲ್ಲ. ಮಾದೇಶ ಅಲ್ಲಿಗೆ ಬಂದಾಗ ಗೀತಾ ಇವರು ಮನೆಯಲ್ಲಿ ಇರಲಿಲ್ಲ. ಅವರು ಬಟ್ಟೆ ತೊಳೆಯಲು ಹೋಗಿದ್ದರು. ಮಾದೇಶ ಬೆಳಗ್ಗೆ *10.30* ಕ್ಕೆ ಗೀತಾ ಇವರ ಮನೆಗೆ ಬಂದು ಹರ್ಷಿತಾ ಇಲ್ಲವಾ ಎಂದು ಕೇಳಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಗೀತಾ ಇವರೇ ಮಾದೇಶನನ್ನು ನನಗೆ ಪರಿಚಯಸಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಪೊಲೀಸರ ಮುಂದೆ ಹರ್ಷಿತಾ ಮನೆಯ ಹೊರಗಡೆ ಬಂದು ಮತ್ತಿಬ್ಬರು ಹುಡುಗಿಯರ ಜೊತೆ ಕುಳಿತು

ಮಾತನಾಡುತ್ತಿದ್ದ ಬಗ್ಗೆ ಪೊಲೀಸರ ಮುಂದೆ ಹೇಳಿದ್ದೇನೆ. ಹರ್ಷಿತಾ ತನ್ನ ತಾಯಿಯ ಜೊತೆ ಬಟ್ಟೆ ಒಣಗಿಹಾಕಲು ಹೋಗಿದ್ದಳು ಎಂದು ಸಹ ಪೊಲೀಸರ ಮುಂದೆ ಹೇಳಿದ್ದೇನೆ. ನಾನು, ಹರ್ಷಿತಾ, ಭವ್ಯ ಮತ್ತು ಸಂಗೀತಾ ಸಿಮೆಂಟ್ ಇಟ್ಟಿಗೆ ಮೇಲೆ ಕುಳಿತು ಮಾತನಾಡುತ್ತಿದ್ದೆವು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ನಾವೆಲ್ಲರೂ ಬಿಡಿಸಲು ಪ್ರಯತ್ನ ಮಾಡಿದ್ದೆವು ಆಗ ಗೀತಾ ಇವರಿಗೂ ಸಹ ಚಾಕುವಿನಿಂದ ಕೈಗಳಿಗೆ ಚುಚ್ಚಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ನ್ಯಾಯಾಧೀಶರ ಮುಂದೆ ನಾನು ಬಟ್ಟೆ ಒಣಗಿಹಾಕಲು ಹೋದಾಗ ಹರ್ಷಿತಾ ಮತ್ತು ಹರ್ಷಿತಾಳ ಗಂಡ ಮಾದೇಶ ಮಾತನಾಡಿಕೊಂಡು ಸಂಗೀತಾ ಇವರ ಮನೆ ಹತ್ತಿರ ನಿಂತಿದ್ದರು ಎಂದು ಹೇಳಿಕೆ ಕೊಟ್ಟಿದ್ದೇನೆ. ಗೀತಾ ಬಟ್ಟೆ ಒಣಗಿಹಾಕಿ ಮನೆ ಒಳಗೆ ಹೋದರು ಎಂದು ಹೇಳಿಕೆ ಕೊಟ್ಟಿದ್ದೇನೆ. ಆ ಕಾಲಕ್ಕೆ ನಾನು ಸಹ ಅವರು ಗಂಡ ಹೆಂಡತಿ ಮಾತನಾಡುತ್ತಾರೆ ಎಂದು ಮನೆ ಬಳಗೆ ಹೋಗಿದ್ದೆ ಎಂದು ನ್ಯಾಯಾಧೀಶರ ಮುಂದೆ ಹೇಳಿದ್ದೆ. ನಾನು ಬಿಡಿಸಲು ಹೋದಾಗ ನನಗೂ ಸಹ ಚಾಕುವನ್ನು ತೋರಿಸಿ ಹೆದರಿಸಿದ್ದ ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಗಲಾಟೆ ಕೇಳಿ ಸಂತೋಷ್ ಮತ್ತು ಅಭಿಮನ್ಯು ಆ ಸ್ಥಳಕ್ಕೆ ಬಂದಿದ್ದರು ಮತ್ತು ಮಾದೇಶನಿಗೆ ಎರಡು ಏಟು ಹೊಡೆದಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಸಂಗೀತಾ ಮತ್ತು ಗೀತಾ ಹರ್ಷಿತಾಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಪೊಲೀಸರ ಮುಂದೆ ಹೇಳಿದ್ದೇನೆ. ಅದೇ ದಿನ ಹರ್ಷಿತಾ ಮರಣಹೊಂದಿದ ಬಗ್ಗೆ ಗೊತ್ತಾಗಿತ್ತು. ಗೀತಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಸಂಗೀತಾ ನೀರು ಕುಡಿಸಿದ್ದರು ಮತ್ತು ಚಾಕುವಿನಿಂದ ಮೇಲೆ ನೀರು ಬಿದ್ದಿತ್ತು ಎಂದು ನ್ಯಾಯಾಧೀಶರ ಮುಂದೆ ಮತ್ತು ಪೊಲೀಸರ ಮುಂದೆ ಹೇಳಿದ್ದೇನೆ. ನಾನು ಊರಿಗೆ

ಹೋಗಲು ತಯಾರಿ ಮಾಡಿಕೊಂಡಿದ್ದಾಗ ಹರ್ಷಿತಾ ನನ್ನನ್ನು ಬಾ ಸ್ವಲ್ಪ ಹೊತ್ತು ಮಾತಡೋಣ ಎಂದು ಕೂರಿಸಿಕೊಂಡಿದ್ದಳು ಮತ್ತು ಆ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಾನು ಗೀತಾ ಇವರಿಗೆ ತುಂಬಾ ಆತ್ಮೀಯರು ಆಗಾಗ ಫೋನ್ ನಲ್ಲಿ ಮಾತನಾಡುತ್ತಿದ್ದೆವು ಎಂದರೆ ನಿಜ. ನಾನು ಗೀತಾ ಇವರ ಮನೆಗೆ ಹೋಗೇ ಇರಲಿಲ್ಲ ಎಂದರೆ ಸರಿಯಲ್ಲ. ಗೀತಾ ನನ್ನ ಸ್ನೇಹಿತೆ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೀತಾ ಇವರ ಹೇಳಿಕೆಯಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಚಾಕುವನ್ನು ಕೋರ್ಟ್ ನಲ್ಲೇ ಪ್ರಥಮ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ಅಂತಹ ಚಾಕು ಎಲ್ಲರ ಮನೆಯಲ್ಲೂ ದೊರೆಯುತ್ತವೆ ಎಂದರೆ ಸರಿಯಲ್ಲ. ನಾನು ಆರೋಪಿತನನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಗೀತಾ ಇವರ ಮನೆಗೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಪರಿಚಯ ಮಾಡಿಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*